# ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾಳಿ

**ಸಿ.ಸಿ. ನಂ.1577/2019**

ಪಿರ್ಯಾದುದಾರರುಃ- ರಮೇಶ ಎಂ ಇ ಬಿನ್ ಈಶ್ವರಪ್ಪ ಎಂ , 40 ವರ್ಷ , ವ್ಯವಸಾಯ
ವಾಸಃ ಹೆಚ್ ಗೋಪಗೊಂಡನಹಳ್ಳಿ ಗ್ರಾಮ , ಹೊನ್ನಾಳಿ ತಾಲ್ಲೂಕು

ವಿರುದ್ದ

ಆರೋಪಿಃ- ಸಿದ್ದಪ್ಪ ಯಾನೆ ಸಿದ್ದನಗೌಡ ಬಿನ್ ನಾಗಬಸಪ್ಪ , 46 ವರ್ಷ ,
ಮೆಕ್ಕೆಜೋಳ ವ್ಯಾಪಾರಿ , ವಾಸಃ ಯರಗನಾಳ್ ಗ್ರಾಮ ,
ನ್ಯಾಮತಿ ತಾಲ್ಲೂಕು

## ದಂಡ ಪ್ರಕ್ರಿಯ ಸಂಹಿತೆ ಕಲಂ 313 ರಡಿ ಪ್ರಕಾರ ಆರೋಪಿತನ ಹೇಳಿಕೆ

ಪ್ರಶ್ನೆಃ 1) ನ್ಯಾಯಾಲಯದ ಮುಂದೆ ದೂರುನೊಂದಿಗೆ ಫಿರ್ಯಾದುದಾರರು ತಮ್ಮ ಪ್ರಮಾಣಪತ್ರದಲ್ಲಿ ತಿಳಿಸಿರುವ ವಿಚಾರವನ್ನು ತಿಳಿದುಕೊಂಡಿದ್ದೀರಾ?

ಉತ್ತ ಃ-

ಪ್ರಶ್ನೆಃ 2) ಫಿರ್ಯಾದುದಾರರವರು ತಮ್ಮ ಪ್ರಮಾಣಪತ್ರದಲ್ಲಿ ನೀವು 2019 **ನೇ ಜೂಲೈ ತಿಂಗಳ ಮೊದಲನೇ ವಾರದಲ್ಲಿ ಗೃಹಕೃತ್ಯದ ಅಡಚಣೆ ಹಾಗೂ ಸಾಲ ತೀರುವಳಿಗಾಗಿ ತನ್ನ ಬಳಿ ರೂ.** 10,00,000/- **ಹಣವನ್ನು ಕೈಗಡ ರೂಪದಲ್ಲಿ ಕೊಡವಂತೆ ಕೇಳಿದ್ದರಿಂದ ಮತ್ತು ಸದರಿ ಹಣವನ್ನು** 1-2 **ತಿಂಗಳ ಒಳಗಾಗಿ ಹಿಂತಿರುಗಿಸುವುದಾಗಿ ಕೇಳಿಕೊಂಡಿದ್ದರಿಂದ ತಾನು** 8,00,000/- **ಹಣವನ್ನು ಸದರಿ ದಿನ ಸಾಲದ ರೂಪದಲ್ಲಿ ನಿಮಗೆ ನೀಡಿರುತ್ತಾರೆ** ಎಂದು ಸಾಕ್ಷಿ ಹೇಳಿದ್ದಾರೆ. ಈ ಬಗ್ಗೆ ಏನು ಹೇಳುವಿರಿ?

**ಉತ್ತರ**

ಪ್ರಶ್ನೆಃ 3) ಸದರಿಯವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ನೀವು ತೆಗೆದುಕೊಂಡಿರುವ ಸಾಲದ ಹಣಕ್ಕೆ ನೀವು ತನಗೆ **ರೂ.**8,00,000-00 **ಬೆಳಗುತ್ತಿ ಗ್ರಾಮದ ಕರ್ನಾಟಕ**

**ಬ್ಯಾಂಕ್ ಗೆ ಸೇರಿದ ಚೆಕ್ ನಂ.**182312 ನ್ನು ಕೊಟ್ಟು ಸದರಿ **ಚೆಕ್ಕ**ನ್ನು ದಿನಾಂಕ 11-09-2019 ರಂದು **ಕರ್ನಾಟಕ ಬ್ಯಾಂಕ್ , ಹೊನ್ನಾಳಿ ಶಾಖೆಗೆ ನಗದೀಕರಣಕ್ಕಾಗಿ** ನೀವು ತಿಳಿಸಿದ ದಿನಾಂಕದಂದು ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ಹೇಳಿದ್ದಾರೆ. ಈ ಬಗ್ಗೆ ಏನು ಹೇಳುವಿರಿ?

ಉತ್ತರ

ಪ್ರಶ್ನೆ: 4) ಸದರಿಯವರು ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ನಂತರ ಸದರಿ **ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ** ಎಂಬ ಕಾರಣದಿಂದ ಅಮಾನ್ಯಗೊಂಡಿರುತ್ತದೆ ಎಂದು ಮೆಮೋ ಮೂಲಕ ವಾಪಸ್ ಬಂದಿದ್ದರಿಂದ ತಾನು ನಿಮಗೆ ದಿನಾಂಕ 26-09-2019 ರಂದು ವಕೀಲರ ಮೂಲಕ ಲೀಗಲ್ ನೋಟಿಸ್‌ನ್ನು ನೋಂದಾಯಿತ ಅಂಚೆಯ ಮೂಲಕ ಕಳುಹಿಸಿ ಹಣವನ್ನು ಮರುಪಾವತಿಸುವಂತೆ ತಿಳಿಸಿದ್ದರೂ ನೀವು ಸಾಲದ ಹಣವನ್ನು ಮರುಪಾವತಿಸಿರುವುದಿಲ್ಲವೆಂದು ಸಾಕ್ಷಿ ಹೇಳಿದ್ದಾರೆ. ಈ ಬಗ್ಗೆ ಏನು ಹೇಳುವಿರಿ?

ುತರ :-

ಪ್ರಶ್ನೆ: 5) ನೀವು ಏನನನ್ನಾದರೂ ಹೆಚ್ಚಿನದನ್ನು ಹೇಳಬಯಸುವಿರಾ?

ಉತ್ತರ :-

ಪ್ರಶ್ನೆ: 6) ನಿಮ್ಮ ಪರ ಯಾವುದಾದರೂ ದಾಖಲಾತಿಗಳನ್ನು ಹಾಜರುಪಡಿಸುವಿರಾ?

ಉತ್ತ :-

ಪ್ರಶ್ನೆ: 7) ನಿಮ್ಮ ಪರ ಸಾಕ್ಷ್ಯವಿದೆಯಾ?

ಉತ್ತ :-

(ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿ ಆತನ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು)

ಸ್ಥಳ: ಹೊನ್ನಾಳಿ

ದಿ: 12-11-2021

ಪ್ರ. ದ. ನ್ಯಾ. ದಂ. ಹೊನ್ನಾಳಿ.